ಹಂಚಿಕೆಯ ಬಗ್ಗೆ ಎಷ್ಟು ನೀರು ಬರುತ್ತದೆ, ಮಲಪ್ರಭಾ ಯೋಜನೆಗೆ ಅವಶ್ಯಕವಾದ ನೀರನ್ನು ಹಂಚಿಕೆ ಮಾಡಿಕೊಳ್ಳುವಾಗ ನಮ್ಮ ಭಾಗ ಏನು, ನಮಗೆ ಒದಗತಕ್ಕ ನೀರಿನಲ್ಲಿ ಎಷ್ಟು ಭಾಗ ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕೆಂಬುದು ಮೈಸೂರು ಸರ್ಕಾರಕ್ಕೆ ಸೇರಿರುವ ಪ್ರಶ್ನೆ. ಆದುದರಿಂದ ಈ ಮಲಪ್ರಭಾ ಯೋಜನೆಯನ್ನು ನಿಧಾನ ಮಾಡುವುದು ಸರಿಯಿಲ್ಲ. ದಯವಿಟ್ಟು ತತ್‌ಕ್ಷಣ ಇದನ್ನು ತೆಗೆದುಕೊಳ್ಳುವುದಕ್ಕೆ ಪರ್ಮಿಷ್ಷನ್ ಕೊಡಬೇಕೆಂದು ಅವರನ್ನು ಕೇಳಿದ್ದೇನೆ. ಅವರಲ್ಲಿ ನಾವು ಇಷ್ಟು ವಾಗ್ದಾದ ಮಾಡಿ ನಮ್ಮ ಮನೋಭಾವನೆಯನ್ನು ಅವರಿಗೆ ತಿಳಿಸಿದ ಮೇಲೆ ಈಗ ಪ್ಲಾನಿಂಗ್ ಕಮಿಷನ್ನಿನವರು ಒಂದು ಪತ್ರ ಬರೆದಿದ್ದಾರೆ. ನೀರನ್ನು ಯಾವ ರೀತಿ ಮೈಸೂರಿನ ಹಂಚಿಕೆಯೊಳಗೆ ಅಡ್ಜಸ್ಟ್ ಮಾಡುತ್ತೀರಿ, ನೀರನ್ನು ಯಾವ ಯಾವ ರೀತಿಯಲ್ಲಿ ಉಪಯೋಗ ಮಾಡುತ್ತೀರಿ ಯಾವ ಯಾವ ಕ್ರಾಪ್‌ಗಳನ್ನು ಬೆಳೆಯುತ್ತೀರಿ ಮತ್ತು ಪ್ಯಾಟರನ್ ಆಫ್ ಯೂಟಿಲೈಸೇಷನ್ ಯಾವ ರೀತಿ ಇದೆ ಎಂಬುದನ್ನು ತಿಳಿಸಿ ಎಂದು ಅದರಲ್ಲಿ ಹೇಳಿದೆ. ಅವೆಲ್ಲಕ್ಕೂ ಉತ್ತರ ಈಗಾಗಲೇ ಹೋಗಿರಬೇಕು. ಆ ರೀತಿ ಇನ್ನೂ ಅವರಿಗೆ ಉತ್ತರ ಹೋಗದೇ ಇದ್ದರೆ, ಇಂದಲ್ಲ, ನಾಳೆ ಹೋಗುತ್ತದೆ. ಅದರ ಜೊತೆಗೆ ನಾನು ಈ ತಿಂಗಳ ಅಂತ್ಯದಲ್ಲಿ ಅಥವಾ ಮುಂದಿನ ತಿಂಗಳ ಪ್ರಾರಂಭದಲ್ಲಿ ಅಲ್ಲಲ್ಲರ ತಕ್ಕ ಇಂಜನಿಯರುಗಳನ್ನು ಕರೆದುಕೊಂಡು ಹೋಗಿ ಈ ವಿಷಯಗಳನ್ನು ದೀರ್ಘವಾಗಿ ಚರ್ಚೆಮಾಡಿ ಇದರ ಬಗ್ಗೆ ತೀವ್ರ ಕಾರ್ಯಕ್ರಮವನ್ನು ತೆಗೆದುಕೊಳ್ಳುವವನಾಗಿದ್ದೇನೆ. ಈ ಮಲಪ್ರಭಾ ಯೋಜನೆಯನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕಾರ್ಯಗತ ಮಾಡಬೇಕೆಂಬ ವಿಷಯದಲ್ಲಿ ಮಾನ್ಯ ಸದಸ್ಯರಿಗಿಂತಲೂ ಸರ್ಕಾರಕ್ಕೆ ತೀವ್ರಾಭಿಲಾಷೆ ಇದೆಯೆಂದು ಈ ಸಂದರ್ಭದಲ್ಲಿ ನಾನು ಸದಸ್ಯರಿಗೆ ತಿಳಿಸಿಚ್ಚಿಸುತ್ತೇನೆ. ಈ ಬಗ್ಗೆ ಯಾವ ಒಂದು ಅಡ್ಡಿ ಆತಂಕ ಬಂದರೂ ಅದನ್ನು ಯಾವ ರೀತಿಯಲ್ಲಾದರೂ ಬಗೆಹರಿಸಿ ಆ ಯೋಜನೆಯನ್ನು ಕೂಡಲೇ ತೆಗೆದುಕೊಳ್ಳಬೇಕೆಂಬುದರಲ್ಲಿ ದೀರ್ಘಾಲೋಚನೆ ಮಾಡಿ ಆ ಬಗ್ಗೆ ಮತ್ತಾವ ಅಡ್ಡಿ ಆತಂಕಗಳು ಬಾರದಂತೆ ಮಾಡಿ ಈ ಮಲಪ್ರಭಾ ಯೋಜನೆಯನ್ನು 1960-61 ನೆಯ ಸಾಲಿನಲ್ಲಿ ಕಾರ್ಯಗತ ಮಾಡಬೇಕೆಂಬ ವಿಷಯದಲ್ಲಿ ಸರ್ಕಾರಕ್ಕೆ ಮಹತ್ತರವಾದ ಆಕಾಂಕ್ಷೆ ಇದೆ.

ಇನ್ನು ಹಣಕಾಸಿನ ವಿಷಯದಲ್ಲಿ ಶ್ರೀಮಾನ್ ವೈಕುಂಠ ಬಾಳಿಗಾ ಅವರು ದೇಶದ ಹಿತದೃಷ್ಟಿಯಿಂದ ಈ ಯೋಜನೆಗಳನ್ನು ಕಾರ್ಯಗತ ಮಾಡುವಾಗ ಅಡ್ಡಿ ಬರಬಾರದು ಎಂದು ಹೇಳಿದರು. ನಿಜ. ಅಡ್ಡಿ ಬರಬಾರದು. I am really very happy that he has taken so much of interest particularly in this project which is very important, essential and remunerative which should not be neglected even for a moment.

ಇನ್ನೊಂದು ವಿಷಯವನ್ನು ಹಣಕಾಸಿನ ವಿಷಯದಲ್ಲಿ ಹೇಳುವುದಾದರೆ ಈಗ ಹಣಕಾಸಿನ ಕೊರತೆ ಇಲ್ಲ. ಆ ಕೊರತೆಯಿಂದ ಈ ಕೆಲಸವನ್ನು ನಿಲ್ಲಿಸಿಲ್ಲ. ಇದಕ್ಕೋಸ್ಕರವಾಗಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 1 ಕೋಟಿ ರೂಪಾಯಿಗಳನ್ನು ಈ ಯೋಜನೆಗೆ ಒದಗಿಸಿದ್ದೇವೆ. ಈಗ ಆ ಹಣ ಹಾಗೆಯೇ ಇದೆ. ಹಣದ ಅಭಾವದಿಂದ ಕೆಲಸವನ್ನು ಹಿಂತೆಗೆದು ನಿಲ್ಲಿಸಿದ್ದೇವೆಂಬ ಸಂದೇಹ ಯಾರಿಗಾದರೂ ಇದ್ದರೆ, ಅದನ್ನು ಬಿಟ್ಟು ಬಿಡಿ. ನಾವು ಈ ವಿಷಯದಲ್ಲಿ ತಾಂತ್ರಿಕ ಸಲಹೆಗಳನ್ನು ಪಡೆದು ಈ ಯೋಜನೆಯನ್ನು ಕಾರ್ಯಗತ ಮಾಡುತ್ತಿದ್ದೇವೆ. ಈ ವಿಷಯ not merely to the Central Government but also to the State Governmentಗೆ ಸೂಚಿತ್ತಿದೆ. ಈ ಬಗ್ಗೆ They are the highest technical advisers ಎಂದು ತೀರ್ಮಾನವಾಗಿದೆ.

Sri B. VAIKUNTA BALIGA.—That is only with regard to the details of the schemes.

ಶ್ರೀ ಎಚ್. ಎಂ. ಚನ್ನಬಸಪ್ಪ.—ಹೌದು. ಈ ಸಂದರ್ಭದಲ್ಲಿ ತಜ್ಞರ ಸಲಹೆಗಳನ್ನೂ, ಚೆಕ್ನಿಕಲ್ ಅಡ್ವೈಸರುಗಳ ಸಲಹೆಗಳನ್ನೂ, ಪ್ಲಾನಿಂಗ್ ಕಮಿಷನ್ ಮತ್ತು ಕೇಂದ್ರ ಸರ್ಕಾರದ ಸಲಹೆಗಳನ್ನೂ ತೆಗೆದುಕೊಳ್ಳಬೇಕು. ಏಕೆಂದರೆ ಅವರ ಸಲಹೆಗಳು ಬಹುತೇಕ ನಮಗೆ ಹೆಚ್ಚಿನ ಮಟ್ಟಿಗೆ ಸಹಾಯವಾಗುತ್ತವೆಂದು ನಾನು ತಿಳಿಸುತ್ತಿದ್ದೇನೆ. ಎರಡನೆಯದಾಗಿ ಪ್ಲಾನಿಂಗ್ ಕಮಿಷನ್ನಿನವರ ಮನೋಭಾವ ಈ ಬಗ್ಗೆ ಸ್ವಲ್ಪಮಟ್ಟಿಗೆ ಸಹಾಯವಾಗುತ್ತಲಿದೆ ಎಂಬುದನ್ನು ಸಹ ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಆದುದರಿಂದ ತಾವುಗಳಾರೂ ಈ ವಿಚಾರದಲ್ಲಿ ದಿಂದ ಯಾವ ಅನುಮಾನವನ್ನೂ ಇಟ್ಟುಕೊಳ್ಳಬಾರದೆಂದು ಹೇಳುತ್ತೇನೆ. ಈ ದಿವನ ಈ ನಿರ್ಣಯವಾದರೂ ಒಂದು ಸರಿಯಾದ ರೀತಿಯಲ್ಲಿ ಬಂದಿದ್ದರೆ ಇದನ್ನು ಒಪ್ಪಿಕೊಳ್ಳುತ್ತಿದ್ದೆ. ಆದರೆ ಈಗ ಈ ನಿರ್ಣಯ ಬಂದಿರತಕ್ಕ ರೀತಿಯಲ್ಲೇ ನಾನು ಇದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಈಗ ಮಾನ್ಯ ಸದಸ್ಯರು ತಂದಿರತಕ್ಕ ನಿರ್ಣಯದಲ್ಲಿ ಪದಗಳು ಹೀಗಿರುತ್ತವೆ "without waiting for its being included in the Third Five-Year Plan" ಎಂದು ಹೇಳಿರುತ್ತಾರೆ. ನಾವು ಈ ಯೋಜನೆಯನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲೇ ತೆಗೆದುಕೊಳ್ಳಬೇಕೆಂದು ಪ್ರಯತ್ನಗಳನ್ನು ನಡೆಸುತ್ತಿರುವಾಗ ಮಾನ್ಯ ಸದಸ್ಯರು ಮೂರನೆಯ ಪಂಚವಾರ್ಷಿಕ ಯೋಜನೆಗೆ ಕಾಯಬೇಡಿ ಎಂದು ಹೇಳಿದ್ದಾರೆ. ಈಗಾಗಲೇ ಈ ನಿರ್ಣಯವನ್ನು ತಂದಿರತಕ್ಕ ಮಾನ್ಯ ಸದಸ್ಯರು ಹೇಳಿರುವಂತೆ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲೇ ಇದು ಸ್ಪಿಲ್ ಓವರ್ ಆಗಿರುತ್ತದೆ. ಆ ರೀತಿ ಈಗಾಗಲೇ ಸರ್ಕಾರ ಎಲ್ಲ ಪ್ರಯತ್ನಗಳನ್ನೂ ನಡೆಸಿದೆ. ಹಾಗಿರುವಾಗ ಈ ಯೋಜನೆಯ ವಿಚಾರದಲ್ಲಿ ಸರ್ಕಾರದವರಿಗೆಷ್ಟು ತೀವ್ರ ಅಭಿರಾಷೆಯಿದೆ ಎಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬಹುದು. ಈಗಾಗಲೇ ಸರ್ಕಾರ ಈ ಮಾರ್ಗದಲ್ಲಿ ಸಾಕಷ್ಟು ಪ್ರಯತ್ನ ನಡೆಸಿದೆಯೆಂದು ಹೇಳಲಿಚ್ಛಿಸುತ್ತೇನೆ. ಹಾಗಿರುವಾಗ ಸರ್ಕಾರದವರು ಪ್ರತ್ಯೇಕವಾಗಿ ಈ ದಿವನ ಇಂಥ ಒಂದು ನಿರ್ಣಯವನ್ನು ಒಪ್ಪಿಕೊಳ್ಳುವುದರಲ್ಲೇನೂ ಅಭ್ಯಂತರವಿರಲಿಲ್ಲ. ಆದರೆ ನಾವು ಕೈಗೊಳ್ಳುವ ಕೆಲಸ ಸುಗಮವಾಗಿ ನಡೆಯಬೇಕಾಗಿರುವುದರಿಂದ ನಾವು ಈಗ C. W. P. C. ಮತ್ತು ಪ್ಲಾನಿಂಗ್ ಕಮಿಷನ್ನಿನವರ ಹಾಗೂ ಕೇಂದ್ರ ಸರ್ಕಾರದವರ ಅಡ್ಮಿನಿಸ್ಟ್ರೇಟಿವ್ ಕ್ಲಿಯರೆನ್ಸ್ ತೆಗೆದುಕೊಂಡು ಈ ಕಾರ್ಯ ಪ್ರಾರಂಭ ಮಾಡುವುದು ಒಳ್ಳೆಯದೆಂದು ಭಾವಿಸಿದ್ದೇವೆ. ಈ ವಿಚಾರಗಳನ್ನೆಲ್ಲ ಆದಷ್ಟು ಬೇಗ ನಾವು ಬರುಮಾಡಿಕೊಂಡು ನಾವು ಈ ಕಾರ್ಯವನ್ನಾರಂಭಿಸಿದರೆ ಆಗ ಈ ಕೆಲಸ ಸುಸೂತ್ರವಾಗಿ ನಡೆಯುತ್ತದೆ. ಆದರೆ ಈ ಸಂದರ್ಭದಲ್ಲಿ ಶ್ರೀಮಾ

(ಶ್ರೀ ಎಚ್. ಎಂ. ಚೆನ್ನಬಸಪ್ಪ)

P. G. ಸಿದ್ಧಾಂತಿಯವರು ಸರ್ಕಾರ ಪ್ಲಾನ್‌ಕೋರ್ ನಲ್ಲಿ ಸೇರದೆ ಇದ್ದಂಥ ಶರಾವತಿ ವ್ಯಾಲಿಯ ಕೆಲಸ ವನ್ನು ಕೈಗೊಂಡು ಕೋರಿನಲ್ಲಿ ಸೇರಿದ್ದ ಈ ಕೆಲಸ ವನ್ನು ಕೈಬಿಟ್ಟಿದ್ದಾರೆಂದು ಹೇಳಿದರು. ಆದರೆ ಶರಾವತಿ ವ್ಯಾಲಿಯ ವಿಚಾರದಲ್ಲಿ ಫಾರಿನ್ ಎಕ್ಸ್‌ಛೇಂಜ್‌ನ ತೊಂದರೆಯಿದ್ದ ಕಾರಣ ಅದನ್ನು ತೆಗೆದು ಕೊಳ್ಳಬೇಕಾಗಿ ಬಂತು. ಆದರೆ ಈ ಯೋಜನೆಗೆ ಅಂಥ ಫಾರಿನ್ ಎಕ್ಸ್‌ಛೇಂಜ್ ತೊಂದರೆಯಿರುವುದಿಲ್ಲ. ಹಣದ ತೊಂದರೆಯೂ ಸಹ ಇರುವುದಿಲ್ಲ. ಆದರೆ ನಮಗೆ ಕೆಲವು ಕ್ಲಿಯರೆನ್ಸ್‌ಗಳು ಬರಬೇಕಾಗಿದೆ. ಅವುಗಳು ಬಂದಕೂಡಲೇ ಈ ಕಾರ್ಯವನ್ನು ಪ್ರಾರಂಭ ಮಾಡೋಣವೆಂದುಕೊಂಡಿದ್ದೇವೆ. ಬಹುಶಃ ಈ ತಿಂಗಳ ಕೊನೆಯಲ್ಲೋ ಅಥವಾ ಮುಂದಿನ ತಿಂಗಳ ಪ್ರಾರಂಭದಲ್ಲೋ ನಾನೇ ದೆಹಲಿಗೆ ಖುದ್ದಾಗಿ ಹೋಗಿ ಇದನ್ನು ಕಾರ್ಯಗತ ಮಾಡಿಕೊಂಡು ಬರುವುದಕ್ಕೆ ಪ್ರಯತ್ನ ಮಾಡುತ್ತೇನೆಂಬ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಟ್ಟಮೇಲೆ ಅವರು ತಮ್ಮ ನಿರ್ಣಯ ವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿ ದ್ದೇನೆ.

ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಮಲಪ್ರಭಾ ಯೋಜನೆಯನ್ನು ಅತಿ ತೀವ್ರವಾಗೇ ಕೈಗೊಳ್ಳಲಾಗು ತ್ತದೆಂಬ ಭರವಸೆಯನ್ನು ಕೊಟ್ಟರುವುದರಿಂದ ನಾನು ಈ ನಿರ್ಣಯವನ್ನ ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿಯನ್ನ ಬೇಡುತ್ತೇನೆ.

ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ನಾನೂ ನನ್ನ ತಿದ್ದುಪಡಿಯನ್ನು ವಾಪಸ್ಸು ಪಡೆಯಲು ಅನುಮತಿ ಬೇಡುತ್ತೇನೆ.

Mr. SPEAKER.—The Hon'ble member Sri A. S. Patil who has been authorised by the Hon'ble Member who has moved this resolution wants to withdraw the resolution and the Hon'ble member Sri A. J. Doddameti who has moved an amendment to the resolution also wants to withdraw his amendment. Have they the permission of the House to withdraw the amendment and the resolution ?

The resolution and the amendment were by leave of the House, withdrawn.

Non-official. Resn. re. rehabilitation of people likely to be affected under Rakaskop Water Scheme.

(Sri L. B. Birje moved the following resolution in Marathi.)

[Sri L. B. BIRJE (Khanapur).—(*in Marathi*) I beg to move the following resolution :

"That this Assembly recommends to Government to take immediate steps to rehabilitate the people who are affected due to submersion of their lands and houses in the Rakaskop Water Scheme."]

Mr. SPEAKER.—Motion moved :

"That this Assembly recommends to Government to take immediate steps to rehabilitate the people who are affected due to submersion of their lands and houses in the Rakaskop Water Scheme."

(Sri L. B. BIRJE spoke in Marathi.)

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖಾನಚಿವರು).—ಅಧ್ಯಕ್ಷರೇ, ಅವರು ಮರಾಠಿ ಭಾಷೆಯಲ್ಲಿ ಮಾತನಾಡಿದರೆ ನನಗೆ ಏನೇನೂ ಅರ್ಥವಾಗುವುದಿಲ್ಲ. ಆದುದರಿಂದ ಅವರಿಗೆ ನಾನು ಉತ್ತರ ಕೊಡಬೇಕಾದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು.—ಆದರೆ ನಾನು ಅವರಿಗೆ ಇಂಥ ಭಾಷೆಯಲ್ಲೇ ಮಾತನಾಡಿ ಎಂದು ಒತ್ತಾಯ ಮಾಡ ಲಕ್ಕೆ ಬರುವುದಿಲ್ಲ. ನನಗೇನೋ ಮರಾಠಿ ತಿಳಿ ಯುತ್ತದೆ. ಆದರೆ ಅದನ್ನು ತಮಗೆ ಹೇಗೆ ತಿಳಿಸುವುದು ?

(Sri L. B. BIRJE continued his speech in Marathi.)

5 P.M.

* Sri V. S. PATIL (Belgaum-I).—Sir, I support the resolution moved by my friend Sri Birje for the rehabilitation of the people who are being affected by this water-scheme at Rakaskop. I need not go into the merits or demerits of the scheme, because of the fact that it is meant for supplying water to Belgaum City, which was in need of such a scheme not only recently, but I can say, for the last hundred years. I have read in the *Times of India* that there was scarcity in Belgaum City in 1853. So this scheme was required to be taken up and several attempts were actually made till 1914 for the implementation of this particular scheme. The scheme was ready at the time of the merger of our area into Mysore State. It has been actually implemented by the enthusiastic Minister for Public Works for which I must thank him on behalf of the people of Belgaum. But at the same time, I have to bring to his notice that due to the implementation of this scheme, several villagers are being affected and especially agriculturists. My friend Mr. Birje has narrated the population, acreage

and the villages that are affected by this scheme. Four villages which lie on either side of the River Markandeya—eastern portion belongs to this State and the western part belongs to Bombay State. The villagers on either side who are affected are moving this Government since the inception of that scheme. They have made several representations to the Government urging the Government to give them some help for rehabilitation.

I have myself taken up this cause and met several Ministers and have made representations to them. I have met the Ministers for Public Works, Forest and the Chief Minister. I have made plain to them that rain starts in these parts in June every year and if the schemes for rehabilitation are not completed before June, certainly those people will be the greatest sufferers. I have brought this fact to the notice of all the Ministers but I am sorry to state that no single Minister has taken any step to alleviate the dangers that are coming up. Every time according to the policy of this Government the Ministers send their subordinates very quickly as if a visitor should feel that the scheme will be completed. But he has only to be disappointed. I have addressed several letters to the Chief Minister and other Ministers and every one of them told me that they were going to do it. But what they want to do they have not made it clear. We on behalf of the people have pointed out certain spots for building huts. I do not know whether any Minister here has ever constructed a house .For constructing houses it requires six months to collect materials and erect the structure. Even though we are trying for the last six months and even though we have pointed out the spot where rehabilitation has to take place, the Government is so negligent that they have not taken possession of the site. So many months have elapsed, and barely two months remain now. Within these two months it is impossible to construct a house and still the officers are sleeping over the matter. What I feel about it is that the responsible officers to whom we have been referred by the Ministers, say that they will look into the matter. I told them that the owners of these lands are willing to give possession of the land to the Government provided the Government officers approach them. These officers have told me several times that they will go and ask but they have not gone and asked. This clearly shows that these officers are bent upon seeing, as alleged by my friend Sri L. B. Birje, that those people being Marathi people evacuate the spots and the officers can throw some currency notes on their face for compensation. The determination of this Government appears to be that they must be evicted out of the spots and that is why we have criticised them. I have received some correspondence from the Secretariat and I am surprised to read it. This Government has given me in writing that only about 100 acres are being submerged this year and subsequently other lands may be submerged. What is the compensation that these people are going to get? The subordinate officers have valued the lands at such low rates that nobody can agree. At present on both sides of the river there are sugarcane growing lands. The present yield is 30 tons per acre and the rate is Rs. 30 per Bengal maund That means an agriculturist gets Rs. 1,500 per year. If he deducts Rs. 1,000 the net profit is Rs. 500. What is shown by these officers is Rs. 1,200...

Sri H. M. CHANNABASAPPA.—Is it the suggestion of the Hon'ble member that Government should direct that it should be valued at Rs. 1,200?

Sri V. S. PATIL.—Certainly not. They must look to the actual price that is prevailing today. My suggestion is that the Government must pay the market price.

Sri H. M. CHANNABASAPPA.—It is not the Government that fixes the compensation. It is the officers. Is it your suggestion that the Government should direct that they should be valued at a higher rate than what is done at present?

Sri V. S. PATIL.—The officers concerned must determine the market price looking to the actual yield of

(SRI V. S. PATIL)

the land, profits that an agriculturist gets from the land and the price prevalent in the market. On this basis they have to do it without...

Sri H. M. CHANNABASAPPA.—What has the Government to do in this matter?

Sri V. S. PATIL.—They must instruct their officers to look into these factors and give them the market price. I do not want anything which is not allowed by law. This Government should see that real market prices are fixed for the acquired land and not leave it to Talaris to fix the price. Even though only 2 months remain for the starting of monsoon this Government is sleeping over the matter. The Hon'ble Minister for P.W.D. promised me to visit the site and see them personally and finalise them. He had actually sent his tour programme and promised to visit the place on 25-3-1960 at 6 or 7 A.M. We had intimated the people there to place all the demands before the Hon'ble Minister. But suddenly he changed his mind and went to Khanapur because the Congress President of that place prevailed upon him to cancel his visit to this place and see some other place. So, he did not turn up at all. Unless the Minister comes to the spot and sees the actual things that happen there, it would be difficult to know how the Government machinery works. It is practically immovable at every stage.

Every one knows, Sir, that the Government machinery from the Tahasildar up to the Secretariat will require for one paper to reach through this channel at least one year. So, my submission to this Government is not to look at the Marathi people with mere smile. The Hon'ble Minister chose to go to Khanapur because the Congress President of Belgaum District suggested to him an alternative or an additional scheme for Markandeya.

Sri H. M. CHANNABASAPPA.—The Hon'ble Member is a very good lawyer. He is also a trained politician and parliamentarian. I fail to understand why he goes on with inference of his own. I can understand if it is based on facts. If he wanted to have some propaganda value, I will do some propaganda for him.

Sri V. S. PATIL.—My inferences ary based on facts. I do not want to say anything of my own. The Hon'ble Minister promised us to see the site, because lands are to be submerged during the coming monsoon. There is no use going there afterwards because he cannot see the lands at all when they are submerged. That is why we had invited him before the monsoon started. He had promised but the Congress President and the Congressmen of my constituency in Belgaum District are always against us. They wish we are ruined and they have got some grudge against us. They have told him to see a certain site or the proposed dam which is not at all before the Government. It is being considered and that may be considered later on It is not finalised but the Hon'ble Minister wanted to see that site rather than the site where the people are to be drowned tomorrow. That is why I am inferring that the Government had practically become a tool in the hands of those white caps. That is very dangerous. The Government should not do such things. They should do their duty as impartially as possible. The Minister should go to a place where there is danger and not to a place where there is no danger. Similarly, I had approached the Minister for Forests. The people there had demanded lands, and they had put in an application on 3rd January 1960. I had seen the Hon'ble Minister several times and I had requested him to come and see whether the lands were really arable or not and whether paddy could be cultivated in those lands or not and then give those lands to them because the proposal of the Government was to give them dry lands where no paddy could be grown.

Sri K. F. PATIL.—It has not been possible to come there immediately. After the session, I would like to come and see it personally along with the Hon'ble Member.

Sri V. S. PATIL.—The Hon'ble Minister has promised several times to come; but since he has failed to come and changed his programmes, I wanted to bring it to the notice of the House. Otherwise, there was no necessity. He may even give us land tomorrow. But is it possible to cultivate paddy there immediately? It will require some time to bring it under cultivation.

Sri K.F. PATIL (Minister for Agriculture).—If the Departmental people had recommended it, I would have straightaway sanctioned it. Because the recommendation of the Department is not there, I wanted to see it personally.

[MR. DEPUTY SPEAKER in the Chair.]

Sri V. S. PATIL.—It is not an easy thing to get departmental recommendation. To get things done through the departmental source is not an easy thing. It cannot be done by a man like me whose pockets are empty. A man with full pockets will have to approach the officers, because no paper will be found. I have got experience even in this Secretariat; no file can be found unless something is given; if things are to be done, in the Department, there must be a white cap. Otherwise, we cannot get it done. That is why I had to approach the Hon'ble Minister. That is the reason why I am pleading before this House; the poor people are fed up with promise and they want actual things to be done. Looking to the enthusiasm of the Hon'ble Minister for Public Works, I had hopes that he would do it definitely, but unfortunately I have become disappointed because of the atmosphere there and because of the white caps. Otherwise, he would have done it. I am sure of it. I request him on behalf of those people to be kind and sympathetic and act impartially in this matter and solve this particular difficulty. There is one thing to which I would like to refer. I have received a reply from the Government that those people have given an agreement that they would not cultivate the land this year and 4 per cent of the compensation will be given to them as damage. This is sheer non-sense; I have told you that Rs. 1,200 had been valued as valuation and 4 per cent of that which they are going to give for a person who way getting Rs. 2,500 for years is more a mockery. Therefore, I submit that the Hon'ble Minister may be pleased to see that no room is given for bickerings and for the complaint that simply because they are Marathi people they have been harassed and put to hardship. Therefore, I request this Ministry to do things early and immediately because there is no time to lose further.

(*Sri B. R. Sunthankar rose to speak*).

Sri H. M. CHANNABASAPPA.—Do you also want to have some propaganda?

Sri V. S. PATIL.—May I know whether the Hon'ble Minister has taken my speech as a propaganda or real fact? It is a thing which is beneficial to all (*Laughter*).

Sri B. R. SUNTHANKAR (Belgaum II).—Mr. Speaker, I rise to support the resolution placed before this House by my Hon'ble colleague Mr. Birji. Belgaum town is one of the unfortunate towns in not having a protected water supply scheme. As a matter of fact, this Rakaskop Water scheme is as old as 50 years. It was first mooted during the First War. But anyhow, for some reason or other, it was being postponed from year to year. There were a number of reasons. The people expected that after the Congress Ministry came into power this scheme would be taken up as early as possible and Belgaum would get its protected water supply. But unfortunately, the Congress politics in our District came in the way. In our District, unfortunately, it is our bitter experience for the last several decades I might say, whenever there are any schemes in the interests of the Marathi people, the District Congress Committee and the people in the District Congress Committee, as my Hon'ble colleague Sri V. S. Patil has put it, the white cap men, always came in the way. So on account of their obstructionist policy,

(SRI B. R. SUNTHANKAR)

their unreasonable policy, this scheme could not be taken up by the Congress Government then. This scheme lagged behind. We are thankful to the Hon'ble Minister for P. W. D. He has taken up the scheme and we hope to get water supply for Belgaum Town by the end of 1961. Now the question comes. The construction of the dam is in progress. It is an earthen dam about 100 feet high and a few hundred feet in length. My honourable friend Mr. Birje has narrated how this dam, how the storing of water, is going to affect the four villages near about. Some hundreds of families are going to be affected. More than two thousand people, residents in those villages are going to be affected. They will be thrown out of their residences. They will lose their lands. What has Government done ?

5-30 P.M.

Sri H. M. CHANNABASAPPA.—How many people will be thrown out ?

Sri B. R. SUNTHANKAR.—About 2,000.

Sri H. M. CHANNABASAPPA.—Two thousand families ?

Sri B. R. SUNTHANKAR.—No. Hundreds of families; five or six hundred and about two thousand people.

Sri H. M. CHANNABASAPPA.—Please obtain correct information from Mr. Patil and not exaggerate it.

Sri B. R. SUNTHANKAR.—I know rough details.

Sri V. S. PATIL.—Two villages are going to be submerged—Malavi and Belavatti. Even though their houses are not going to be submerged, their lands will be submerged.

Sri B. R. SUNTHANKAR.—I have not exaggerated anything. Unfortunately the Hon'ble Minister cannot understand Marathi. My friend Sri Birje has said about the villages, and part of villages and the number of houses to be submerged. It is not my fault. It is the fault of the Minister that he does not understand Marathi. He should not say irresponsibly that I am giving here exaggerated figures.

Sri H. M. CHANNABASAPPA.—About 2,000...

Sri B. R. SUNTHANKAR.—About 2,000 persons, I said, are being affected. Those are my words.

Sri H. M. CHANNABASAPPA.—Mr. Patil briefs every now and then and puts correct things...

Sri B. R. SUNTHANKAR.—I do not require briefing just as the Hon'ble Minister requires an interpreter. The point is this. The dam will be ready by 1961. All these four villages will be submerged in water.

Sri H. M. CHANNABASAPPA.—How many ?

Sri B. R. SUNTHANKAR.—Four villages will be submerged. Two villages will be completely submerged and parts of two villages. It is unfortunate that the Hon'ble Chief Minister is in charge of the dam, and he does not know the details. As a matter of fact, he should provide the exact details. Instead of that he is asking us to provide the details, and his charge is we are making a propaganda. We are trying to place facts without any exaggeration and without any prestige. We want to acquaint the House with facts and we are charged as if we are carrying on propaganda. On the contrary, the Government is carrying on propaganda. That is my charge.

So, Sir, by next year, the dam will be complete and all that area will be submerged in water.

These two thousand people will be thrown out of those villages. Has Government made any provision for these people ? It was the duty of the Government to make provision for all these people for rehabilitating them. At the time when the construction of this dam was taken up, it was the duty of the Government. But Government had utterly failed in its duty. As my Hon'ble friend Sri V. S. Patil said, it is criminal negligence on the part of the Government. My Hon'ble friend Mr. Birje has already pointed out how discriminatory treatment is given to

Marathi people. He referred to the attitude of the Government in respect of Hidkal dam. There is grave opposition from the people of that area. As Sri Birje said, the Hon'ble Minister has visited the site twice during the last year on account of the opposition of the people there. But here the people are willing to surrender their lands and the Hon'ble Minister does not think it wise to go and visit the site and visit the people and assure the people that the work of rehabilitating those people would be taken up by the Government immediately. Either the Government or the P. W. D. is not doing that, and they charge us that we are here doing propaganda. Is it propaganda ? We are asking the Government to make all provisions for rehabilitating these displaced persons. Some hundreds of families, about two thousand people are affected. Now the monsoon is coming nearer. That is the time of the year when there will be heavy rainfall in that area. There is an average rainfall of more than 100 inches—in those areas about 150". So, heavy rains start there in the month of June. Now the dam is being completed. In this monsoon a large number of acres of land will be submerged on account of the over-flooding of the river. What is Government doing for these people ? It has done nothing. At the most Government may say that there will be some compensation in rupees in currency notes. They will throw them on their faces–some money. Is that going to solve the problem ? My friend Mr. Patil has already stated that the valuation that is done is not correct. Government should assess at the market price rates, according to the yield, according to the net profit that is obtained on those fields. We are asking for the market price. But instead of that, the Hon'ble Minister is trying to phoo phoo us.In this case,the villagers have already made suggestions about fields, about the lands they would be willing to haven They have pointed out some villages is. Khanapur Taluka. Those village have been pointed out by my friend Mr. Birje—that they have been asking for land in villages in Khanapur Taluka. But Government has so far not considered their request, contrary is the case with Hidkal dam, because the people of Hidkal have been opposing. The cat has come out of the bag.

Now, we have recently heard that the people who will be displaced under Hidkal dam would be rehabilitated in Belgaum town. They come from the Kannada area. There is a sinister motive in this. They will be given lands and places in the Mala Maruthi Extension Scheme which is held in abeyance on account of scarcity of water in Belgaum Town. These 20,000 displaced people would be given lands in Belgaum town in the Mal Maruthi Extension scheme.This shows that there is a sinister motive behind this. This Government wants to see that the Marathi people of Belgaum are made a minority there. I am charging the Government that this is the intention behind the proposal of rehabilitating 20,000 displaced Kannada people in Belgaum Town. This is the calculated move. When this is the case, what about the poor peasants of Rakskop? Government have done nothing about rehabilitating these people. So, it is a failure on the part of the Government. We appeal to the Government to at least make some provision to rehabilitate these people. They should be given all the required facilities to be rehabilitated. Some time back my friend Sri M. M. Patil put a question about the rehabilitation of the people under the Tungabhadra project. The Minister for Public Works made a number of assurances about their being rehabilitated. Similarly, Government should give serious consideration to this problem also and give immediate relief to those people. They should act immediately because the rainy season is approaching and will start in the month of June. Before that, all that is necessary should be done. I hope the Hon'ble Minister for Public Works, though some times hasty, who is very enthusiastic in some respects, will come to the rescue of these people.

*ಶ್ರೀ ಎಚ್.ಎಂ. ಚನ್ನಬಸಪ್ಪ(ರೋಣಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖಾ ನಚಿವರು).—ಸ್ವಾಮಿ, ಶ್ರೀಯುತರುಗಳಾದ ಬಿರ್ಜೆ, ವಿ. ಎಸ್. ಪಾಟೀಲ್, ಮತ್ತು ನುಂಡಣಕರ್ ಈ ಮೂರು ಜನರೂ ಕೂಡ.....

[Sri N. O. SAMAJI spoke in Marathi]

Sri B. D. JATTI (Chief Minister).—Sir, the Hon'ble Member says that since the Resolution was moved by Sri Birje in Marathi, he expects the Hon'ble Minister also to try to speak in Marathi.

Mr. DEPUTY SPEAKER.—The Minister has started already in Kannada; so, he will continue in Kannada.

Sri B. R. SUNTHANKAR.—If he wants us to understand, he must speak in English at least.

Mr. DEPUTY SPEAKER.—No, no, he cannot.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಶ್ರೀಮಾನ್ ಬಿರ್ಜೆ ಯವರಿಗೆ ಮತ್ತು ಇನ್ನೊಬ್ಬ ಸದಸ್ಯರಿಗೆ ಕನ್ನಡ ತಿಳಿ ಯುತ್ತದೆ. ಅವರಿಂದ ತಿಳಿದುಕೊಳ್ಳಬಹುದು.

ಸ್ವಾಮಿ, ರಕ್ಕಸ್‌ಕೊಪ್ಪ ಜಲಾಶಯದ ಕೆಳಗೆ ಮುಳುಗಡೆಯಾಗುವ ಜಮೀನು ಮತ್ತು ಮನೆಯುಳ್ಳ ಮಾಲೀಕರಿಗೆ ಪುನರ್ವ್ಯವಸ್ಥೆ ಮಾಡಬೇಕೆಂಬ ವಿಷಯದ ಮೇಲೆ ಮಾತನಾಡುವಾಗ ಮಾನ್ಯ ಸದಸ್ಯರು ಯಾವ ರೀತಿ ಮಾತನಾಡಿದರೆಂಬುದನ್ನು ವಿಚಾರಮಾಡಿ ನೋಡಿದರೆ ಹೊರಗಡೆ ಸ್ವಲ್ಪ ಹೆಚ್ಚು ಪ್ರಚಾರ ಮಾಡಿ ಕೊಳ್ಳಬೇಕೆಂಬ ಉದ್ದೇಶದಿಂದ ಮಾತನಾಡಿದಂತೆ ನನಗೆ ಭಾಸವಾಗುತ್ತದೆ ಅವರು ಹೇಳಿರುವ ವಿಷಯ ಗಳು ಬಹಳಮಟ್ಟಿಗೆ ಸತ್ಯಕ್ಕೆ ದೂರವಾಗಿವೆ. ನಾವು ಮಾಡುವುದೆಲ್ಲವೂ ಕೂಡ ಮಾರಾಠಿಗರಿಗೆ ಅನ್ಯಾಯ ಮಾಡಬೇಕೆಂಬ ಭಾವನೆಯಿಂದ ಮಾಡುತ್ತೇವೆಂದು ಅವರು ತಿಳಿದು ಆ ಅರ್ಥ ಕಲ್ಪನೆ ಮಾಡಿ ಅದನ್ನು ಪ್ರಚಾರ ಮಾಡುತ್ತಿದ್ದಾರೆ.

ಅವರು ಹೇಳಿದಂತೆ ಈ ರಕ್ಕಸ್‌ಕೊಪ್ಪ ಜಲಾಶಯ' ಬೆಳಗಾಂ ಜಿಲ್ಲೆಯಲ್ಲಾಗಬೇಕಾದುದು ನೂರಾರು ವರ್ಷಗಳಿಂದ ಹಾಗೆಯೇ ಮೂಲೆಯಲ್ಲಿ ಕುಳಿತಿತ್ತು. ಅದಕ್ಕಾಗಿ 1957ನೆಯ ಇಸವಿಯಲ್ಲಿ 67 ಲಕ್ಷ ರೂಪಾ ಯಿಗಳನ್ನು ಮೈಸೂರು ಸರ್ಕಾರ ಮಂಜೂರು ಮಾಡಿ ಆ ಕಾರ್ಯ ಸಾಧನೆಗೆ ಪ್ರೋತ್ಸಾಹ ನೀಡಿರುವಾಗ ಅದು ಮಾರಾಠಿಗರ ವಿಷಯದಲ್ಲಿ ನಮಗಿರುವ ಸಹಾನು ಭೂತಿಯನ್ನು ಸೂಚಿಸುತ್ತದೆಯೆ, ಇಲ್ಲವೆ ಎಂಬುದನ್ನು ದೇಶ ಊಹಿಸಿ ಮನದಟ್ಟು ಮಾಡಿಕೊಳ್ಳಲಿ.

[*Sri L.B. Birje interrupted in Marathi*]

Sri H. M. CHANNABASAPPA.—No, it is a question of fact. Is it or is it not a fact? You yourself admit it.

ಎರಡನೆಯದು ಬೆಳಗಾಂ ಪಕ್ಕದಲ್ಲಿ ಮಾರ್ಕಂಡೇಯ ನದಿಗೆ ಹಾಕಿದ್ದ ಸೇತುವೆ ಮುರಿದುಹೋಗಿದೆಯೆಂದು ಶ್ರೀ ಸಾಮಾಜಿಯವರು ಆರು ಗಂಟೆಯ ಸಮಯದಲ್ಲಿ ಹೇಳಿದಾಗ ಏಳುಗಂಟೆಯೊಳಗೆ ಅಲ್ಲಿಗೆ ಹೋಗಿ ನೋಡಿ ಅದು ಆವಶ್ಯಕವೆಂದು ಮನಗಂಡು ಮರಾಠಿಗರು ಅಥವಾ ಕನ್ನಡಿಗರು ಅದನ್ನು ಹೇಳಿದರೆಂದು ಭೇದ ಮಾಡದೆ ಅದಕ್ಕಾಗಿ ಶಂಕುಸ್ಥಾಪನೆ ಮಾಡಿದ್ದು ಕನ್ನಡಿಗರ ಔದಾರ್ಯ ಹೌದೆ ಅಲ್ಲವೆ, ಎಂದು ಕೇಳು ತ್ತೇನೆ.

ಶ್ರೀ ವಿ. ಎಸ್. ಪಾಟೀಲರು ಇದ್ದದ್ದರಲ್ಲಿ ಸ್ವಲ್ಪ ನ್ಯಾಯವಾದಿಗಳು. ಶ್ರೀ ಸಾಮಾಜಿಯವರು ಮತ್ತು ಇನ್ನಿಬ್ಬರು ಫೌಂಡೇಷನ್ ಸೆರೆಮನೆಗೆ ಬಾರದೆ ಹೊರ ಗಿದ್ದರು. ನಾನೇ ಹೋಗಿ ಕರೆದುಕೊಂಡು ಬಂದು ಅವರೆದುರಿಗೇ ಶಂಕುಸ್ಥಾಪನೆ ಮಾಡಿ ಆ ಕೆಲಸ ಬೇಗ ಆಗಲಿ, ಅವರಿಗೆ ಸಹಾಯವಾಗಲಿ ಎಂದು ಪ್ರಯತ್ನಿಸಿರುವುದು, ಮೈಸೂರು ಸಂಸ್ಥಾನದಲ್ಲಿ ಎಲ್ಲ ಜನರ ಹಿತರಕ್ಷಣೆಯಾಗಲೆಂದು ಕೆಲಸ ಕಾರ್ಯ ಕೈಕೊಳ್ಳುತ್ತಿರುವುದು ನಮ್ಮ ಸೌಜನ್ಯವಲ್ಲವೆ? ಹೀಗಿ ರುವಾಗ ನೀವು ಮಾಡುತ್ತಿರುವುದು ಕೇವಲ ಪ್ರಚಾರ ವಲ್ಲದೆ ಮತ್ತೇನು?

ಇದೇ ಮೈಸೂರು ಸಂಸ್ಥಾನದಲ್ಲಿ ತಮಿಳರಿದ್ದಾರೆ, ತೆಲುಗರಿದ್ದಾರೆ, ಮಾರಾಠಿಗರಿದ್ದಾರೆ, ಕನ್ನಡಿಗ ರಿದ್ದಾರೆ. ಎಲ್ಲ ಭಾಷೆಗಳನ್ನಾಡುವ ಸಾವಿರಾರು ಜನರು ನೂರಾರು ವರ್ಷಗಳಿಂದ ಇದ್ದಾರೆ; ಯಾರಿಗೂ ಅಪಕಾರ ಮಾಡಬೇಕೆಂಬ ಉದ್ದೇಶ ನಮಗಿಲ್ಲ. ಮೈಸೂರು ಸರ್ಕಾರದ ಔದಾರ್ಯ ಇಡಿಯ ಪ್ರಪಂಚಕ್ಕೇ ಗೊತ್ತಾಗಿದೆ. ಕೇವಲ ನಣ್ಣುಪುಟ್ಟ ವಿಷಯಗಳನ್ನು ತೆಗೆದುಕೊಂಡು ಈ ರೀತಿ ಮಾನ್ಯ ಸದಸ್ಯರು ಪ್ರಚಾರ ಮಾಡುವುದು ಸರಿಯಲ್ಲ ಎಂದು ಮಾತ್ರ ತಿಳಿಸು ತ್ತಿದ್ದೇನೆ.

ಶ್ರೀ ಎಲ್. ಬಿ. ಬಿರ್ಜೆ.—ಬರಿಯ ಪ್ರಚಾರ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಹಾಗಲ್ಲ. ನಾನು ಬೇಕಾದರೆ ಬಂದು ನಿಮಗೆ ಪ್ರಚಾರ ಮಾಡಿಕೊಡುತ್ತೇನೆ.

ಈ ಸಭೆಯಲ್ಲಿ ಒಂದು ಅನಾವಶ್ಯಕವಾಗಿ ಮಾತನಾಡಬಾರದು. ಅವರಿಗೆ ಅಂಕಿಅಂಶಗಳು ಗೊತ್ತಿಲ್ಲ. ಶ್ರೀಮಾನ್ ವಿ. ಎಸ್. ಪಾಟೀಲರನ್ನು ಕೇಳಬೇಕು. Sri V. S. Patil is the only man who comes with facts and figures at least to some extent. ಎರಡು ಸಾವಿರ ಜನಸಂಖ್ಯೆಗೆ ತೊಂದರೆಯಾಗುತ್ತದೆಂದು ಹೇಳಿದರು. ಅಂಕಿಅಂಶ ಗಳನ್ನು ಕೊಡುತ್ತೇನೆ. ಒಟ್ಟು ಐದು ಹಳ್ಳಿಗಳಿಗೆ affect ಆಗುತ್ತದೆ. ಅದರಲ್ಲಿ ಒಂದೇ ಹಳ್ಳಿ ಮುಳು ಗಡೆಯಾಗತಕ್ಕದ್ದು. ಈಗ ತಾನೇ ಎರಡು ನಿಮಿಷ ಗಳ ಹಿಂದೆ ಶ್ರೀಮಾನ್ ಸುಂಠನಕರ್ ಅವರು ಎಲ್ಲ ಹಳ್ಳಿ ಗಳೂ ಮುಳುಗುತ್ತವೆ ಎಂದು ಹೇಳಿದವರು, ನಾನು ಕೊಂಚ ಎಚ್ಚರಿಕೆ ಮಾಡಿದ ಮೇಲೆ ಎರಡು ಹಳ್ಳಿಗಳು ಮುಳುಗಿ ಇನ್ನೂ ಎರಡೂವರೆ ಹಳ್ಳಿಗಳು ಮುಳುಗುತ್ತವೆಂದು ಹೇಳಿದರು, ಏನು ಅಪಪ್ರಚಾರ! ಆಗಲೇ ಹೇಳಿದಂತೆ ಬೆಳವತ್ತಿ ಎಂಬ ಒಂದೇ ಒಂದು ಗ್ರಾಮ ಮುಳುಗುತ್ತದೆ. ಸಾವಿರಾರು ಜನರಿಗೆ ತೊಂದರೆಯಾಗುತ್ತದೆಂದು ಮೊದಲು ಹೇಳಿದವರು, ನಾನು ಉಚಿತವಾಗಿ ಹೇಳಬೇಕು ಎಂದಮೇಲೆ ಎರಡು ಸಾವಿರ ಜನರಿಗೆ ತೊಂದರೆಯಾಗುತ್ತದೆಂದು ಹೇಳಿ ದರು. ಆ ಗ್ರಾಮದಲ್ಲಿರುವ ಸುಮಾರು 80–100 ಸಂಸಾರಗಳಿಗೆ ತೊಂದರೆಯಾಗುತ್ತದೆ. ಇಂಡಿಯಾ ದೇಶದ ಒಂದು ಕುಟುಂಬದ ಸರಾಸರಿ ಜನಸಂಖ್ಯೆಯ ಪ್ರಕಾರ ಲೆಕ್ಕಹಾಕಿದರೆ ಸುಮಾರು 500 ಜನರಿಗೆ ತೊಂದರೆಯಾಗುತ್ತದೆ. ಬೇಗ ಕೆಲಸ ಮಾಡಿಕೊಡಿ ಎಂದರೆ ಸಂತೋಷದಿಂದ ಮಾಡೋಣ. ತಪ್ಪು ಸಮಾ ಚಾರವನ್ನು ಹೇಳುವುದು, ಅದೂ ಈ ಮಾನ್ಯ ಸಭೆ ಯಲ್ಲಿ ಹೇಳುವುದು ಸರಿಯಲ್ಲ. ಒಟ್ಟು ಐದು ಗ್ರಾಮ ಗಳಲ್ಲಿ ಒಂದು ಗ್ರಾಮಮಾತ್ರ ಮುಳುಗಡೆಯಾಗು ತ್ತದೆ, ಬಾಕಿ ಗ್ರಾಮಗಳು ಮುಳುಗಡೆಯಾಗುವುದಿಲ್ಲ. ಆ ಗ್ರಾಮಗಳಿಗೆ ಸೇರಿದ ಜಮೀನುಗಳು ಮುಳುಗಡೆ ಯಾಗುತ್ತವೆ. ಮುಳುಗಡೆಯಾಗಲಿರುವ ಬೆಳವತ್ತಿ,

ಗ್ರಾಮದಲ್ಲಿ 275 ಎಕರೆ ಜಮೀನು ಮುಳುಗಡೆಯಾಗುತ್ತದೆ. ಐದು ಗ್ರಾಮಗಳಿಂದ ಒಟ್ಟು 860 ಎಕರೆ ಜಮೀನು ಮುಳುಗಡೆಯಾಗುತ್ತದೆ.

ಇನ್ನೂ ಎರಡು ತಿಂಗಳಲ್ಲಿ ಮಳೆಗಾಲ ಪ್ರಾರಂಭವಾಗುತ್ತದೆ, ಏನು ಅನ್ಯಾಯ, ಜನರೆಲ್ಲ ಎಲ್ಲಿಗೆ ಹೋಗಬೇಕು, ಸರ್ಕಾರ ಏನು ವ್ಯವಸ್ಥೆ ಮಾಡಿದೆ, ಪ್ರಪಂಚದಲ್ಲಿ ಈ ಸರ್ಕಾರಕ್ಕಿಂತ ಕೆಟ್ಟ ಸರ್ಕಾರ ಇಲ್ಲವೋ ಎನ್ನುವ ಭಾವನೆಯಿಂದ ಮಾತನಾಡಿದರು. ಶ್ರೀಮಾ೯ ವಿ. ಎಸ್. ಪಾಟೀಲರಿಗೆ ಮೊನ್ನೆ ತಾನೇ 1-2-1960ರಲ್ಲಿ ಒಂದು ಕಾಗದ ಬರೆದು ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದಿದ್ದೇವೆ, ಇದುವರೆಗೆ ಏನೇನು ನಡೆದಿದೆ, ಮುಂದೆ ಏನು ಮಾಡುತ್ತೇವೆಂದು ವಿಸ್ತಾರವಾಗಿ ಅದರಲ್ಲಿ ತಿಳಿಸಿದ್ದೇವೆ.

ಶ್ರೀ ವಿ. ಎಸ್. ಪಾಟೀಲ್.—ಅದನ್ನು ಓದಿಬಿಡಿ. (ನಗು).

Sri H. M. CHANNABASAPPA.—The cat is out of the bag. (*Laughter*). ನಾವು ಬರೆದಿರುವ ಕಾಗದದಲ್ಲಿ ಹೀಗೆ ತಿಳಿಸಿದ್ದೇವೆ.

> "Out of the four villages in Belgaum taluk that are affected, Belavati is the only village whose gramathana is going to be submerged."

ಈ ವಿಷಯವನ್ನು ಮಾನ್ಯ ಸದಸ್ಯರಿಗೆ ಬರೆದಿದ್ದೂ ಸಹ ಇಲ್ಲಿಗೆ ಒಂದು ಹೆಚ್ಚು ಹಳ್ಳಿಗಳು ಮುಳುಗುತ್ತವೆ ಎಂದು ಹೇಳುವುದು ಸರಿಯೇ ಎಂದು ಕೇಳುತ್ತೇನೆ.

ಎರಡನೆಯದು, ಮುಂದಿನ ಮಳೆಗಾಲ ಬರುವುದರೊಳಗಾಗಿ ಈ ಹಳ್ಳಿಗಳು ಮುಳುಗಡೆಯಾಗುತ್ತವೆ, ಏನು ಮಾಡುವುದು, ಇಂಥ ಅನ್ಯಾಯ ಮಾಡತಕ್ಕ ಸರ್ಕಾರ ಉಂಟೇ ಎಂದು ಕೇಳಿದರು. ಈ ಮಳೆಗಾಲದಲ್ಲಿ ಆ ಗ್ರಾಮ ಮುಳುಗುವುದಿಲ್ಲ. ಇಷ್ಟು ವಿಷಯವನ್ನೂ ತಿಳಿದುಕೊಳ್ಳದೆ ತಪ್ಪು ಅಭಿಪ್ರಾಯವನ್ನು ಈ ಮಾನ್ಯ ಸಭೆಯವರಿಗೆ ಮಾನ್ಯ ಗೌರವ ಸದಸ್ಯರು ಹೇಳತಕ್ಕದ್ದು ಸರಿಯೇ? ಇದು ಪ್ರಚಾರವಲ್ಲದೆ ಮತ್ತೇನು ಎಂದು ಕೇಳುತ್ತೇನೆ. ಇದನ್ನು ಅಪಪ್ರಚಾರವೆಂದು ಹೇಳಬಹುದು. ಈ ವರ್ಷದ ಮಳೆಗಾಲದಲ್ಲಿ ನೂರು ಎಕರೆ ಮುಳುಗಡೆಯಾಗುತ್ತದೆ ಮತ್ತು ಬೆಳವತ್ತಿ ಗ್ರಾಮವು ಮುಂದಿನ ವರ್ಷ ಪ್ರಾಜೆಕ್ಟ್ ಪೂರ್ತಿಯಾದಾಗ ಮುಳುಗಡೆಯಾಗುತ್ತದೆ.

Not a single Minister took any pain whatsoever ಎಂದು ಶ್ರೀಮಾ೯ ವಿ. ಎಸ್. ಪಾಟೀಲರೂ, ಬಾಕಿಯವರೂ ಹೇಳಿದರು. ಶ್ರೀಮಾ೯ ಪಾಟೀಲರು ಸ್ವಲ್ಪಮಟ್ಟಿಗೆ ನ್ಯಾಯವಾದಿಗಳು. ಏನಾದರೂ ಮಾತನಾಡಿದರೆ ನ್ಯಾಯ ಸ್ವಲ್ಪಮಟ್ಟಿಗೆ ಸತ್ಯಕ್ಕೆ ದೂರ ಹೋಗದರೀತಿಯಲ್ಲಿ ಹೇಳುತ್ತಾರೆ. ಅವರ ಸ್ನೇಹಿತರು ಏನಾದರೂ ತಿಳಿದುಕೊಳ್ಳುತ್ತಾರೆಂದು ಸ್ವಲ್ಪ ಸ್ವಲ್ಪ ಸೇರಿಸುತ್ತಾರೆ. ಕಾರಣ, ಹೊರಕ್ಕೆ ಹೋದರೆ ಇಷ್ಟು ಜನರೂ ಅವರನ್ನೂ ಬಿಡುವುದಿಲ್ಲ. ಒಂದುವೇಳೆ ನ್ಯಾಯಕ್ಕೆ ಅನುಗುಣವಾಗಿ ಮಾತನಾಡಿ, ಬಾಗಿಲಿನಿಂದ ಹೊರಕ್ಕೆ ಹೋದರೆ ನಾಲ್ಕು ಜನರೂ ಅವರನ್ನು ಹೀಗೇಕೆ ಮಾತನಾಡಿದೆ ಎಂದು ಹಿಡಿದುಕೊಳ್ಳುತ್ತಾರೆ.

(*Sri N. O. Samaji interrupted in Marathi*)

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ವೇಳೆ ಬೆಳಗಾಂನಲ್ಲಿರುವ ಮರಾಠಿ ಮಾತನಾಡತಕ್ಕ ಜನರಲ್ಲಿ ವಿಶ್ವಾಸವಿಲ್ಲದಿದ್ದಪಕ್ಷದಲ್ಲಿ ಕಣ್ಣುತೆರೆದು, ವಿಶಾಲ ಹೃದಯದಿಂದ 67 ಲಕ್ಷ ರೂಪಾಯಿ ಯೋಜನೆಯನ್ನು ಮಂಜೂರು ಮಾಡುತ್ತಿದ್ದರೇ ಎಂದು ಕೇಳುತ್ತೇನೆ. ಕಾಂಗ್ರೆಸ್‌ನವರ ಹಿಂಸೆಯಿಂದ, ಅವರ ಪ್ರವೇಶದಿಂದ ರಕ್ಷಣಕೊಪ್ಪ ಜಲಾಶಯದ ಕೆಲಸ ಬಹಳ ವರ್ಷಗಳವರೆಗೆ ನಿಂತುಹೋಗಿತ್ತು ಎಂದು ಹೇಳಿದರು. ಇವೊತ್ತು ಅದೇ ಕಾಂಗ್ರೆಸ್‌ನವರು ಅಲ್ಲಿದ್ದಾರೆ. ಅದಕ್ಕೆ ಏನು ಹೇಳುತ್ತೀರಿ? ಇಲ್ಲಿ ಮಾತನಾಡತಕ್ಕ ಅಧಿಕಾರವಿದೆ, ಏನು ಬೇಕಾದರೂ ಮಾತನಾಡಬಹುದೆಂದು ತಪ್ಪು ತಪ್ಪು ಅಭಿಪ್ರಾಯವನ್ನು ನೂಚಿಸತಕ್ಕದ್ದು ಸರಿಯೇ ಎನ್ನುವುದನ್ನು ನೀವೇ ಯೋಚಿಸಿರಿ.

1957ನೆಯ ಇನವಿಯಲ್ಲಿ ಮಂಜೂರಾಗಿ ಕಾರ್ಯರೂಪಕ್ಕೆ ಬಂದು ಈಗಾಗಲೇ ಮೂರನೆಯ ಒಂದು ಭಾಗದಷ್ಟು ಕೆಲಸ ನಡೆದಿದೆ. ಎಂದರೆ ವಾಸ್ತವವಾಗಿಯೂ ಎಲ್ಲ ಜನರ ವಿಶ್ವಾಸವನ್ನೂ ಇಟ್ಟುಕೊಂಡು ಮೈಸೂರು ಸಂಸ್ಥಾನದ ಎಲ್ಲ ಪ್ರಜೆಗಳ—ಅವರು ಕನ್ನಡಿಗರೇ ಆಗಿರಲಿ, ತೆಲುಗರೇ ಆಗಿರಲಿ, ತಮಿಳರೇ ಆಗಿರಲಿ–ಯಾರೇ ಆಗಿರಲಿ ಹಿತವನ್ನು ಸಾಧಿಸಿಕೊಂಡು ನರ್ದಾ ನಡೆದುಕೊಂಡುಬಂದಿದೆ. ಆದುದರಿಂದ ಶ್ರೀಮಾ೯ ಬರ್ಜಿಯವರೂ, ಶ್ರೀಮಾ೯ ಸಾಮಾಜಿಯವರೂ ಮತ್ತು ಶ್ರೀಮಾ೯ ಸುಂಠಣಕರ್ ಅವರೂ ದಯವಿಟ್ಟು ಈ ವಿಷಯವನ್ನು ಭಾಷಾ ಪ್ರಶ್ನೆಗೆ ಲಗತ್ತು ಮಾಡಿ ಸಾಮಾನ್ಯ ಜನಗಳಮೇಲೆ ದುಷ್ಪರಿಣಾಮವಾಗುವ ರೀತಿಯಲ್ಲಿ ಮಾಡಬಾರದೆಂದು ಮಾತ್ರ ಹೇಳುತ್ತೇನೆ.

[*Sri L. B. Birje interrupted in Marathi*]

Sri H. M. CHANNABASAPPA.—They are not going to be submerged this year. I am saying this on the floor of this House not once, but twice, thrice. Then what is the fun in making an accusation that there are only two months for the monsoon and Government are not doing anything?

ನಾವು ಕೈಗೊಂಡಿರತಕ್ಕ ಕಾರ್ಯಗಳೇನು ಎನ್ನುವ ವಿಷಯದಲ್ಲಿ ಎರಡು ಮಾತನ್ನು ಹೇಳಿದರೆ ಸಾಕು. ಬೆಳವತ್ತಿ ಗ್ರಾಮದವರನ್ನು ಪಾಡಾಸ್ ಎಂಬ ಗ್ರಾಮದಲ್ಲಿ ಪುನರ್ವ್ಯವಸ್ಥೆ ಮಾಡಬೇಕೆಂದು 35 ಎಕರೆಯಷ್ಟು ಭೂಮಿಯನ್ನು ಈಗಾಗಲೇ ನಾವು ಅಕ್ವೈರ್ ಮಾಡಿಕೊಳ್ಳುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. This year it is not going to be submerged and we shall see that it is not submerged this year.

ಮಾನ್‌ಸೂನ್ ಬಂದಾಗ ನಾವೂ ನೀವೂ ಈ ಸಭೆಯಲ್ಲಿ ಇರುತ್ತೇವೆ. ಆಗ ಪ್ರಶ್ನೆ ಮಾಡಿ. ಎರಡನೆಯದು 100 ಎಕರೆ ಮುಳುಗಡೆ ಯಾಗತಕ್ಕ ಜನರಿಗೆ ಅವರ ಅಭಿಮತ ತೆಗೆದುಕೊಂಡು ಸೋನಾರ್‌ವಾಡಿ, ಪೊರಾಕು ಬೈಲೂರು ಗ್ರಾಮದಲ್ಲಿ ಜಮೀನು ಕೊಡಬೇಕೆಂದು ವ್ಯವಸ್ಥೆ ಮಾಡಿದ್ದೇವೆ. ರೆಕಾಸ್ಕೋಪ್‌ನಲ್ಲಿ ಒಂದು ಗ್ರಾಮ ಮುಳುಗಡೆ ಆಗುತ್ತದೆ. ಅದಕ್ಕೆ ಅವರ ಅರ್ಭಟವನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಒಂದೊಂದು ಜಲಾಶಯದ ಕೆಳಗೆ 200-300 ಹಳ್ಳಿಗಳು

(ಶ್ರೀ ಎಚ್. ಎಂ. ಚನ್ನಬಸಪ್ಪ)

ಮುಳುಗಡೆ ಆಗತಕ್ಕದ್ದು ಇದೆ. ಅಂತಹದರಲ್ಲಿ ಅವನ್ನೆಲ್ಲಾ ಯಶಸ್ವಿಯಾಗಿ ನೆರವೇರಿಸುತ್ತಾ ಇರುವಾಗ ಈ ಒಂದು ಗ್ರಾಮದ ವಿಷಯದಲ್ಲಿ ತಾತ್ಸಾರ ಮಾಡುತ್ತೀವೆ ಎಂದರೆ ಎಲ್ಲಾದರೂ ನಂಬಿಕೆಗೆ ಅರ್ಹವಾದುದ್ದೇ ಎಂದು ಪ್ರಶ್ನೆ ಮಾಡುತ್ತೇನೆ.

6 P.M.

ಇನ್ನೊಂದು ವಿಷಯ ಹೇಳಿದರು. ಎಂ. ಆರ್. ಪಾಟೀಲ್ ಅವರ ಪ್ರಶ್ನೆ ಬಂದಾಗ ಎಲ್ಲಾ ಅನುಕೂಲ ಮಾಡಿಕೊಡುತ್ತೇವೆ ಎಂದು ಹೇಳಿದರು. ನಾನು ಪ್ರಶ್ನೆ ಮಾಡಿದಾಗ ಒಂದು ವಿಷಯವನ್ನು ಹೇಳಲಿಲ್ಲ ಎಂದು. ಸರ್ಕಾರ ಒಂದು ಆಜ್ಞೆ ಹೊರಡಿಸಿ ಮೈನೂರು ಸಂಸ್ಥಾನದಾದ್ಯಂತ ಎಲ್ಲೆಲ್ಲಿ ಮುಳುಗಡೆ ಆಗುತ್ತವೆ, ಪುನರ್ ವ್ಯವಸ್ಥೆ ಮಾಡಬೇಕು. ಯಾವಕಡೆ ಆದರೂ ಸರಿಯೇ, ಏನೇನು ಅನುಕೂಲ ಮಾಡಬೇಕು ಎಂಬ ಒಂದು ಪಟ್ಟಿಹಾಕಿ ಸರ್ಕಾರದ ಆಜ್ಞೆಯನ್ನು ಸಾರ್ವತ್ರಿಕವಾಗಿ ಹೊರಟಿಸಿದ್ದೇವೆ. ಆ ಆಜ್ಞೆಯನ್ನು ಶ್ರೀಮಾನ್ ಏ. ಎಸ್. ಪಾಟೀಲ್ ಅವರಂತೂ ಓದಿರುತ್ತಾರೆ. ಇವರು ಯಾರು ಓದಿದ್ದಾರೋ ಇಲ್ಲವೋ ಗೊತ್ತಿಲ್ಲ. ಈ ಸಭೆಯಲ್ಲಿ ಒಂದುವೇಳೆ ಹೇಳಿದ್ದೇನೆ. ನಮಗೆ ಏನೂ ಹೇಳಲಿಲ್ಲ ಎಂದರೆ ಅದರಲ್ಲಿ ಅರ್ಥ ಏನು? ನಾಳೆ ಪತ್ರಿಕೆಯಲ್ಲಿ ಇದು ದಪ್ಪ ದಪ್ಪ ಅಕ್ಷರದಲ್ಲಿ ಇಷ್ಟಿಷ್ಟು ಗಾತ್ರ ಬಂದಿತೆಂದರೆ ಮರಾಠಿಗರ ವಿಷಯದಲ್ಲಿ ಏನು ಅನಾದರಣೆ ಮಾಡಿದ್ದಾರೆ ಎಂದು ಜನ ತಿಳಿದುಕೊಳ್ಳಬೇಕು? ಈ ರೀತಿ ಮಾಡುವುದು ಸರಿಯಲ್ಲ ಎಂದು ಮಾತ್ರ ವಿನಯದಿಂದ, ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ.

ಕಾಂಪೆಕ್ಸೇಷ್ ಬಹಳ ಕಡಮೆ ದರದಲ್ಲಿ ಕೊಡುತ್ತಾರೆ; ಹೆಚ್ಚು ಮಾಡಿಸಲಿಕ್ಕೆ ವ್ಯವಸ್ಥೆ ಮಾಡಬೇಕು ಎಂದು ಹೇಳಿದ್ದಾರೆ. ಅವರು ರಾಯರು, ಶ್ರೀಮಾನ್ ಬರ್ಜೆ ಅವರು ಹೇಳಿದ್ದರೆ ಒಪ್ಪಿಕೊಳ್ಳುತ್ತಿದ್ದೆ. ಕಾಂಪೆಕ್ಸೇಷ್ ನಿಗದಿ ಮಾಡತಕ್ಕ ಆಫೀಸರು ಲ್ಯಾಂಡ್ ಅಕ್ವಿಸಿಷ್ ಆಫೀಸರು. ಅವರು ಜ್ಯೂಡಿಷಿಯಲ್ ಆಫೀಸರು ಎಂದು ಅವರಿಗೆ ಗೊತ್ತು, ಹಾಗೆ ಗೊತ್ತಿದ್ದೂ ಕೂಡ ಈ ರೀತಿ ಈ ಸಭೆಯಲ್ಲಿ ನಿಂತು. ಈ ಸರ್ಕಾರ ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ಹೇಳುವುದು ಸರಿಯೇ ಎಂದು ಪ್ರಶ್ನೆ ಹಾಕುತ್ತೇನೆ. ಅದು ಸರಿಯಲ್ಲ. ಅವರಿಗೆ ನಾವು ಸೂಚನೆಕೊಡಬೇಕಾದುದೇ ಇಲ್ಲ, ಕಾಂಪೆಕ್ಸೇಷ್ ಎಂದರೆ ನ್ಯಾಯವಾದ ಬೆಲೆ ಕೊಡಬೇಕೆಂದೇ ಅರ್ಥ.

Sri V. S. PATIL.—Compensation is determined by the Executive Officer and not by a Judicial Officer.

Sri H. M. CHANNABASAPPA.—It is determined by the Land Acquisition Officer and he is a quasi juidicial officer. Government cannot give a direction as to what compensation is to be paid or not to be paid. ಕಡಮೆ ಕೊಡಬೇಕೆಂದು ಅವರ ಆಶೆ ಆದರೆ ಅದು ಸರ್ಕಾರಕ್ಕೆ ತಿಳಿಯದು. ಮತ್ತು ನ್ಯಾಯವಾಗಿ ಆ ಅಧಿಕಾರಿಗಳು ಎಷ್ಟು ಮುಂಜೂರು ಮಾಡುತ್ತಾರೆ ಅಷ್ಟು ಕೊಡುವುದಕ್ಕೆ ನಾವು ಸಿದ್ಧ. ಕಾನೂನು ಬದ್ಧವಾದ, ವಿಧಾಯಕವಾದ ತೀರ್ಮಾನದ ಪ್ರಕಾರ ಪರಿಹಾರ ಕೊಡಬೇಕೇ ವಿನಾ, ಇಷ್ಟುಮಾಡಿ, ಅಷ್ಟುಮಾಡಿ ಎಂದು ಸರ್ಕಾರದವರು ಹೇಳುವುದು ಸರಿಯಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ.

ಇನ್ನೊಂದು ವಿಷಯ, ಹಿಡಕಲ್ ಬಗ್ಗೆ ಹೇಳಿದರು. ಮಂತ್ರಿಗಳು ಅಲ್ಲಿಗೆ ಹೋದರೂನಹ ಸುಳ್ಳು ಕಾರಣ ಹಾಕಿಕೊಂಡು ಬರಲಿಲ್ಲ. ಇಂಥ ತಾರತಮ್ಯ ಮಂತ್ರಿಗಳು ತೋರಿಸಬಹುದೇ ಎಂದು. ಅವರೇ ನನ್ನ ಜೊತೆಯಲ್ಲಿ ಇದ್ದರು. ಬೆಳಗಾಂನಲ್ಲಿ ಸೇತುವೆಗೆ ಶಂಕುಸ್ಥಾಪನೆ ಹಾಕತಕ್ಕ ಕಾಲದಲ್ಲಿ ಕಾರ್ಯಕ್ರಮವನ್ನು ಹಾಕಿದ್ದು ವಾಸ್ತವ. ಅವರಿಗೋಸ್ಕರವಾಗಿಯೇ ಕಾರ್ಯಕ್ರಮ ಹಾಕಬೇಕಾದುದೇನೂ ಇಲ್ಲ. ಯಾರಿಗೂ ಕೂಡ ಬರಬೇಕೆಂದು ತಿಳಿಸಿ ಕಾರ್ಯಕ್ರಮ ಹಾಕಿಲ್ಲ. ಈ ದೇಶದ ಜಲಾಶಯಗಳನ್ನು ನೋಡಬೇಕಾದುದು ನನ್ನ ಕರ್ತವ್ಯ ಇದೆ ಎಂದು ಹೇಳುವ ಕಾಲಕ್ಕೆ ಕಾರ್ಯಕ್ರಮ ಹಾಕಲಾಯಿತು. ಆ ಪ್ರಕಾರ 6 ಅಥವಾ 7 ಘಂಟೆಗೆ ಅಲ್ಲಿಗೆ ಹೋಗಲು ಸಂಧ್ಯವಾಯಿತು. ಅನನುಕೂಲವಾದ ಕಾರಣ ಇವರು ಹೇಳುವ ಜಾಗಕ್ಕೆ ಹೋಗಲಿಲ್ಲವೇ ವಿನಾ ಮತ್ತೆ ಬೇರೆ ಅಲ್ಲ. ಇದು ಒಂದು ಗ್ರಾಮ, ನಾಲ್ಕು ಗ್ರಾಮಗಳನ್ನು ಪುನರ್‌ವ್ಯವಸ್ಥೆ ಮಾಡುವುದು, ಅಲ್ಲಿ ವಿರೋಧವನ್ನು ಪ್ರದರ್ಶನ ಮಾಡಿದಾಗ ಅವರನ್ನು ಕೇಳುವುದು ಅಂಥದ್ದೇನೂ ಇಲ್ಲ. ಮತ್ತು ಅವರಿಗೆ ಅನನುಕೂಲ ಮಾಡಬೇಕು ಎಂಬ ದೃಷ್ಟಿಯಿಂದ ಹೋಗಲಿಲ್ಲ ಎಂದು ಹೇಳಿದರೆ ಅವರ ಮನಸ್ಸಿಗೆ ಒಪ್ಪುತ್ತದೆಯೋ ಎಂದು ಕೇಳುತ್ತೇನೆ. ಅದು ಸರಿಯಲ್ಲ. ಒಂದು ವೇಳೆ ಅವರು ಹೇಳಿದರು ಅಲ್ಲ ಕಾಂಗ್ರೆಸ್ ಪಾರ್ಟಿ ಅವರು ಹೋಗಬೇಡಿ ಎಂದು ಹೇಳಿದರು ಎಂದು ಅದೇ ಕಾಂಗ್ರೆಸ್ ಪಾರ್ಟಿ ಅವರು ಜಲಾಶಯ ನಿರ್ಮಾಣ ಮಾಡಕೂಡದು ಎಂದು ಒತ್ತಾಯ ತರಲಿಕ್ಕೆ ಸಾಧ್ಯವಿರಲಿಲ್ಲವೇ? It does not stand the test of scrutiny. ಈ ರೀತಿ ಸುಮ್ಮನೆ ಪ್ರಚಾರ ಮಾಡಬೇಕೆಂದು ಹೇಳುವುದು ಸರಿಯಲ್ಲ. ಒಂದುವೇಳೆ ನಿವ್ಮ ಸೇತುವೆ ಆಗಬಾರದು ಎಂದು ಹೇಳುವುದಕ್ಕೆ ಸಾಧ್ಯವಾಗುತ್ತಾ ಇರಲಿಲ್ಲವೆ? ಸರ್ಕಾರದವರು ಎಲ್ಲರನ್ನು ಕೇಳಿ ದೇಶದ ಹಿತದೃಷ್ಟಿಯಿಂದ ಯಾವುದು ಅವಶ್ಯಕವೋ ಅದನ್ನು ಮಾಡುತ್ತಾರೆಯೇ ಹೊರತು ಬೇರೆ ಅಲ್ಲ. ಇದೇ ಸಭೆಯಲ್ಲಿ ಕಾಂಗ್ರೆಸ್‌ನವರೂ, ನಾನ್ ಕಾಂಗ್ರೆಸ್‌ನವರು ಎಲ್ಲರೂ ಇದ್ದಾರೆ, ನಾವು ಮಾಡಿದುದು ಸರಿಯಲ್ಲ ಎಂದು ಯಾರೇ ಆದರೂ ಹೇಳಲಿ, ಅದು ಸರಿಯಲ್ಲ. ಮನಸ್ಸಿನಲ್ಲಿ ಈ ಒಂದು ಭಾಷಾವಾರು ಭ್ರಮೆ ಹತ್ತಿ ನ್ಯಾಯಮಾಡಿದರೂ ಕೂಡ ಅನ್ಯಾಯ ಎಂದು ಕಾಣುತ್ತದೆ. ಇದು ನ್ಯಾಯವೇ? ಆದುದರಿಂದ ತಾವು ಈ ರೀತಿ ಮಾತನಾಡಬೇಡಿ. ಇಂತಹುದು ಆಗಬೇಕೆಂದು ಹೇಳಿ, ಬೇಗ ಬೇಗ ಆಗಬೇಕೆಂದು ಹೇಳಿ ಮಾಡಿಸಿ ಕೊಡೋಣ. ಸರ್ಕಾರ ಒಂದು ಅಧಿಕಾರವನ್ನು ವಹಿಸಿ ಈ ರಾಜ್ಯದ ವಿಷಯದಲ್ಲಿ ಮೂರೆ ಮೂಲೆಗಳಲ್ಲೂ ಕೂಡ ವ್ಯವಸ್ಥೆ ಮಾಡತಕ್ಕ ಜವಾಬ್ದಾರಿ ಹೊತ್ತಿರುವುದರಿಂದ ನೀವು ಒಂದು ವೇಳೆ ಮಾಡಿಲ್ಲ ಎಂದು ಹೇಳಿದರೂ ಕೂಡ ನಾವೂ ಮಾಡುವುದಿಲ್ಲ ಎಂದು ಹೇಳುವುದಕ್ಕಾತ್ತದೆಯೇನು?.....

I say ten times on the floor of this House that every man in this State, be he a Kannadiga or Maharastrian, is our man and his interests are safe in the hands of the Government of Mysore just as they have been very safe in the past. Therefore, I would request the

Hon'ble Members not to press these things in that manner. They can press it in any other manner and Government will take such action as may be absolutely necessary in the interest of the people who are going to be affected well in time with the greatest amount of love and affection just as in the other cases. I, therefore, request the Hon'ble Member Sri Birje to withdraw his resolution in the light of the assurances I have given.

Sri L. B. BIRJE.—Sir, in view of the assurance given by the Hon'ble Minister for Public Works, I wish to withdraw my resolution.

The resolution was, by leave of the House, withdrawn.

Non-Offl. Resln. re the laying of new Railway Lines in the State.

Mr. DEPUTY SPEAKER.—Resolution moved:

"That this Assembly is of the opinion that a recommendation be made to the Government of India, for taking early necessary action for constructing the following Railway lines:—

1. Hassan—Mangalore
2. Hubli—Karwar
3. Kottur—Harihar
4. Bangalore—Salem
5. Bangalore—Virajpet
6. Gadag—Raichur"

Sri C. J. MUCKANNAPPA.—Sir, it is already 6-10 P.M. Why not we take up discussion of the resolution tomorrow, Sir?

Sri B. D. JATTI (Chief Minister).—I have no objection, Sir.

Mr. DEPUTY SPEAKER.—The House will now rise and meet tomorrow at 1 P.M.

The House adjourned at Ten Minutes past Six of the Clock to meet again at One of the Clock on Friday, the 8th April 1960.

WD 2946 -GPB—900—1-3-1962